# ಟಗರು ಭಾರೀ ಗುಟುರು!



ಗಾಂಧಿನಗರದ ಬಹುನಿರೀಕ್ಷಿತ ಚಿತ್ರ 'ಟಗರು' ಚಿತ್ರೀಕರಣದ ಕೊನೆಯ ಹಂತವನ್ನು ಪ್ರವೇಶಿಸಿದೆ. ಉಡುಪಿ ಮತ್ತು ಮಂಗಳೂರು ಪರಿಸರದಲ್ಲಿ ಇತ್ತೀಚೆಗೆ ಶೂಟಿಂಗ್ ನಡೆಸುವ ಮೂಲಕ, 'ಟಗರು'ವಿನ ಬಹುತೇಕ ಚಿತ್ರೀಕರಣ ಮುಗಿದಂತಾಗಿದೆ.

ಸೂರಿ ನಿರ್ದೇಶನದ 'ಟಗರು' ಶಿವರಾಜ್ ಕುಮಾರ್ ನಟನೆಯ ಸಿನಿಮಾ. ಸೂರಿ ಹಾಗೂ ಶಿವರಾಜ್ ಈ ಮುನ್ನ ಒಟ್ಟಿಗೆ ಕೆಲಸ ಮಾಡಿದ್ದ 'ಕಡ್ಡಿಪುಡಿ' ಚಿತ್ರ ತನ್ನ ವಿಭಿನ್ನ ನಿರೂಪಣೆ ಹಾಗೂ ಕಲಾವಿದರ ಉತ್ತಮ ನಟನೆಯಿಂದಾಗಿ ಗಮನಸೆಳೆದಿತ್ತು. ಈ ಚಿತ್ರದಲ್ಲೂ ನಾಯಕ–ನಿರ್ದೇಶಕನ ಕಾಂಬಿನೇಷನ್ ಮತ್ತೆ ಪ್ರೇಕ್ಷಕರನ್ನು ಮೋಡಿ ಮಾಡುವ ನಿರೀಕ್ಷೆಯಿದೆ. ಮೈಮೇಲೆ ವಿಚಿತ್ರ ಹಚ್ಚೆ ಹಾಕಿಸಿಕೊಂಡಿರುವ ಹಾಗೂ ಲಾಂಗ್ ಹಿಡಿದು ನಿಂತಿರುವ ನಾಯಕನಟನ ಪೋಸ್ಟರ್ ಗಳು ಶಿವರಾಜ್ ಅಭಿಮಾನಿಗಳ ಗಮನಸೆಳೆದಿವೆ.

ಜಾತ್ರೆಯ ಸೆಟ್‌ನಲ್ಲಿ ಚಿತ್ರೀಕರಿಸಿರುವ ಸಾಹಸ ಸನ್ನಿವೇಶವೊಂದು ಚಿತ್ರದ ಹೈಲೈಟ್ ಆಗಲಿದೆಯಂತೆ. ಜಾಲಿ ಬಾಸ್ಟಿನ್ ಸಾಹಸ ಸಂಯೋಜನೆಯಲ್ಲಿ ರೂಪುಗೊಂಡಿರುವ ದೃಶ್ಯದಲ್ಲಿ ಶಿವಣ್ಣ ಹಾಗೂ ಖಳನಟನ ಪಾತ್ರದಲ್ಲಿ ಧನಂಜಯ್ ನಟಿಸಿದ್ದಾರೆ. ಈ ಹೊಡೆದಾಟದ ದೃಶ್ಯದಲ್ಲಿ ಐವತ್ತು ಫೈಟರ್ ಗಳನ್ನು ಬಳಸಿಕೊಳ್ಳಲಾಗಿದೆಯಂತೆ. ಶಿವಣ್ಣ ಭಾರೀ ಟ್ರಿಕ್ ಒಂದನ್ನು ಚಲಾಯಿಸಿದ್ದಾರಂತೆ.

ಹಿರಿಯ ನಟ ದೇವರಾಜ್ ಪ್ರಮುಖ ಪಾತ್ರವೊಂದರಲ್ಲಿ ನಟಿಸಿರುವ ಸೂರಿ ಸಿನಿಮಾದ ಇನ್ನೊಂದು ವಿಶೇಷ. ಈ ಮುನ್ನ ಟಿ. ಗುರುದತ್ ನಿರ್ದೇಶನದ 'ಸಮರ' ಚಿತ್ರದಲ್ಲಿ ಇಬ್ಬರೂ ಒಟ್ಟಿಗೆ ನಟಿಸಿದ್ದರು. ಅದಾದ ನಂತರ ಇಬ್ಬರೂ ಒಂದೇ ಚಿತ್ರದಲ್ಲಿ ನಟಿಸಿರುವುದು ಈಗಲೇ. ಮಾನ್ವಿತಾ ಹರೀಶ್ ಹಾಗೂ ಭಾವನಾ ಮೆನನ್ 'ಟಗರು' ಚಿತ್ರದ ನಾಯಕಿಯರು. ವಸಿಷ್ಠ ಸಿಂಹ ತಾರಾಗಣದಲ್ಲಿರುವ ಮತ್ತೊಬ್ಬ ಪ್ರಮುಖ ಕಲಾವಿದ. ಮಹೇಂದ್ರ ಸಿಂಹ ಛಾಯಾಗ್ರಹಣ ಹಾಗೂ ಚರಣ್ ರಾಜ್ ಸಂಗೀತ ಚಿತ್ರಕ್ಕಿದೆ.

# ಹಳೆ ನೀತಿ, ಹೊಸ ಪ್ರೀತಿ

ಕೊಳೆಗೇರಿ ಹುಡುಗ ಹಾಗೂ ಶ್ರೀಮಂತ ಕುಟುಂಬದ ಹುಡುಗಿಯ ನಡುವಣ ಲವ್ ಸ್ಟೋರಿಯ ಕಥೆ 'ರಾಜ ಲವ್ಸ್ ರಾಧೆ' ಚಿತ್ರದ್ದು. ನಾಯಕ ಬಡವನಾಗಿದ್ದರೂ ಸ್ವಾಭಿಮಾನಿಯಾಗಿರುವುದು, ನಾಯಕಿ ಶ್ರೀಮಂತ ಮನೆತನದ ಜಂಬದ ಹುಡುಗಿಯಾಗಿರುವುದು – ಇಂಥ ಕಥೆಗಳ ಸಾಕಷ್ಟು ಕನ್ನಡ ಚಿತ್ರಗಳು ತೆರೆ ಕಂಡಿವೆ. ಆದರೆ, ರಾಜ–ರಾಧೆಯ ಕಥೆ ಬೇರೆಯೇ ಇದೆ ಎನ್ನುತ್ತಾರೆ ನಿರ್ದೇಶಕ ರಾಜಶೇಖರ್.

ವಿಜಯ ರಾಘವೇಂದ್ರ ಚಿತ್ರದ ನಾಯಕ. ಅವರಿಗೆ ಕೂಡ ಚಿತ್ರಕಥೆಯ ಬಗ್ಗೆ ಅಪಾರ ವಿಶ್ವಾಸವಿದೆ. ತಮ್ಮ ವೃತ್ತಿಜೀವನದಲ್ಲಿ ಇಂಥದೊಂದು ವಿಭಿನ್ನ ಪಾತ್ರದಲ್ಲಿ ಹಿಂದೆಂದೂ ನಟಿಸಿರಲಿಲ್ಲ ಎನ್ನುವ ಖುಷಿ ಅವರದು. ರಾಧಿಕಾ ಪ್ರೀತಿ ಚಿತ್ರದ ನಾಯಕಿ. ಆಕೆ ಈ ಮುನ್ನ 'ಪಂಟ' ಎನ್ನುವ ಚಿತ್ರದಲ್ಲಿ ನಟಿಸಿರುವ ಅನುಭವ ಹೊಂದಿದ್ದಾರೆ.

'ಈ ಸಂಭಾಷಣೆ' ಚಿತ್ರದ ಮೂಲಕ ಗಾಂಧಿನಗರಕ್ಕೆ ಪರಿಚಿತರಾಗಿರುವ ರಾಜಶೇಖರ್ ಈಗ ಪ್ರೇಮಕಥೆಯ ಮೂಲಕ ಮತ್ತೊಮ್ಮೆ ಚಿತ್ರರಸಿಕರ ಎದುರು ಬರುತ್ತಿದ್ದಾರೆ. ನವಿರು ಕಥೆಯ ಈ ಸಿನಿಮಾ ಯುವಜನರ ಜೊತೆಗೆ ಕೌಟುಂಬಿಕ ಪ್ರೇಕ್ಷಕರನ್ನೂ ಸೆಳೆಯುವ ವಿಶ್ವಾಸ ಅವರದು.

ಬೆಂಗಳೂರು ಮತ್ತು ಮೈಸೂರಿನ ಪರಿಸರದಲ್ಲಿ ಅವರು ತಮ್ಮ ಚಿತ್ರದ ಶೂಟಿಂಗ್ ನಡೆಸಿದ್ದಾರೆ. ಇತ್ತೀಚೆಗಷ್ಟೆ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಪೇಟೆಗೆ ಬಂದಿದ್ದು, ಸಿನಿಮಾವನ್ನು ತೆರೆ ಕಾಣಿಸುವ ತಯಾರಿಯಲ್ಲಿ ಚಿತ್ರತಂಡ ತೊಡಗಿಕೊಂಡಿದೆ.

ಹಿರಿಯ ನಟಿ ಭವ್ಯ ತಾಯಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರವಿಶಂಕರ್, ಶುಭಾ ಪೂಂಜ, ತಬಲಾ ನಾಣಿ, ಮಿತ್ರ, ಡ್ಯಾನಿ ಕುಟ್ಟಪ್ಪ ಹಾಗೂ ಶೋಭರಾಜ್ ತಾರಾಗಣದಲ್ಲಿರುವ ಪ್ರಮುಖರು.

